**ಕರ್ನಾಟಕ ವಿಧಾನ ಪರಿಷತ್ತು**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ತಳವಾರ ಸಾಬಣ್ಣ ಇವರು ನಿಯಮ-72ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಕುರಿತು.**

**ಸೂಚನೆ:-**

ಆದಿವಾಸಿ ಕೋಲಿ/ಕಬ್ಬಲಿಗ/ಬೆಸ್ತರ್ ಇದರ ಪರ್ಯಾಯ ಪದಗಳನ್ನು ಪರಿಶಿಷ್ಟ ಪಂಗಡದ (ಎಸ್.ಟಿ) ಪಟ್ಟಿಯಲ್ಲಿ ಸೇರಿಸಬೇಕೆಂದು ಸುಮಾರು 40 ವರ್ಷಗಳಿಂದ ಸಮುದಾಯದವರು ಹೋರಾಟ ಮಾಡುತ್ತಿದ್ದಾರೆ. ಈ ಸಮುದಾಯದ ಟೋಕ್ರೆ ಕೋಲಿ/ಕೋಲಿ ಢೋರ್/ಕೋಯಾ ಪರ್ಯಾಯ ಪದಗಳು ಈಗಾಗಲೇ ಪರಿಶಿಷ್ಟ ಪಂಗಡದ 1956 ರಿಂದ ಇದ್ದಾವೆ. ಈ ಸಮುದಾಯದ ಪರ್ಯಾಯ ಪದಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಬೇಕೆಂದು ಕರ್ನಾಟಕ ರಾಜ್ಯ ಸರ್ಕಾರದಿಂದ 1996 ರಲ್ಲಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿದ ನಂತರ ಹಲವಾರು ಕಾರಣಗಳಿಂದ ರಾಜ್ಯ ಕೇಂದ್ರ ಸರ್ಕಾರದ ಮಧ್ಯೆ ಪ್ರಸ್ತಾವನೆಯ ಕಡತ ಓಡಾಟ ಮಾಡಿ ದಿನಾಂಕ:30.10.2023 ರಂದು ರಿಜಿಸ್ಟಾರ್ ಜನರಲ್ ಆಫ್ ಇಂಡಿಯಾದವರಿಂದ ಕೆಲವು ಟಿಪ್ಪಣಿಗಳೊಂದಿಗೆ ರಾಜ್ಯ ಸರ್ಕಾರಕ್ಕೆ ಕಡತ ವಾಪಸ್ಸು ಬಂದಿದೆ. ಈ ಕಡತ ವಾಪಸ್ಸು ಬಂದು ಎರಡು ವರ್ಷಗಳು ಕಳೆದರು ಸರ್ಕಾರ ಯಾವುದೇ ಸ್ಪಂದನೆ ನೀಡಿಲ್ಲಾ ಬ್ರಿಟೀಷರ ಕಾಲದ Census Reports Gazetteers ಮತ್ತು Anthropoligical Studies ಮುಂತಾದವು ಕೋಲಿ/ಕಬ್ಬಲಿಗ/ಬೆಸ್ತರ್ ಪರ್ಯಾಯ ಪದಗಳು ಮೂಲ ನಿವಾಸಿಗಳು (Aboriginal) ಮತ್ತು ಪ್ರಾಚೀನ ಬುಡಕಟ್ಟು ಜನಾಂಗ ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ ದಾಖಲೆಗಳಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಬುಡಕಟ್ಟು ಜನಾಂಗದ ಲಕ್ಷಣಗಳಿದ್ದರೂ ತೀರಾ ಅನ್ಯಾಯಕ್ಕೆ ಒಳಗಾದ ಮತ್ತು ಬಡತನದಲ್ಲಿಯೇ ಬದುಕುತ್ತಿರುವ ಕೋಲಿ/ಕಬ್ಬಲಿಗ/ಬೆಸ್ತರ್/ಅಂಬಿಗಾ/ಬಾರಿಕಾ/ಮೊಗವೀರ ಪರ್ಯಾಯ ಪದಗಳನ್ನು ಟೋಕ್ರೆ ಕೋಳಿ/ಕೋಳಿ ಢೋರ್/ಕೋಯಾ ಸಮುದಾಯದ ಬಿಟ್ಟು ಹೋದ ಪರ್ಯಾಯ ಪದಗಳೆಂದು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಕಳುಹಿಸುವ ಕುರಿತು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:-**

ಸರ್ಕಾರದ ಆದೇಶ ಸಂಖ್ಯೆ:ಸಕಇ 119 ಎಸ್ಎಡಿ 2006, ದಿನಾಂಕ:08/04/2010 ರ ಆದೇಶದಲ್ಲಿ ರಾಜ್ಯದಲ್ಲಿನ ಗಂಗಾಮತ ಮತ್ತು ಅದರ ಉಪ ಜಾತಿಗಳ (ಕೋಲಿ, ಕಬ್ಬಲಿಗ, ಅಂಬಿಗ, ಬಾರಿಕ ಒಳಗೊಂಡಂತೆ) ರಾಜ್ಯದ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಮೂಲಕ ಕುಲಶಾಸ್ತ್ರೀಯ ಅಧ್ಯಯನ ಕೈಗೊಂಡು ವರದಿ ಪಡೆದು ಸಲ್ಲಿಸಲು ಆದೇಶಿಸಲಾಗಿದೆ.

ಸರ್ಕಾರದ ಆದೇಶದನ್ವಯ ಗಂಗಾಮತ ಮತ್ತು ಅದರ ಉಪ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ ಮೂಲಕ ಕೈಗೊಂಡು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರ ದಿನಾಂಕ:17/02/2014 ರ ಅಂತಿಮ ವರದಿಯನ್ವಯ ರಾಜ್ಯ ಸರ್ಕಾರದ ಶಿಫಾರಸ್ಸಿನೊಂದಿಗೆ ಕೇಂದ್ರ ಬುಡಕಟ್ಟು

ವ್ಯವಹಾರಗಳ ಮಂತ್ರಾಲಯ ನವದೆಹಲಿ ಇವರಿಗೆ ದಿನಾಂಕ:03/03/2014 ರಲ್ಲಿ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ಗಂಗಾಮತ ಮತ್ತು ಅದರ ಉಪ ಜಾತಿಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವ ಬಗ್ಗೆ ಈಗಾಗಲೇ ಭಾರತ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ರವರು ಪ್ರಸ್ತಾಪಿಸಿರುವ ಅಂಶಗಳ ಬಗ್ಗೆ ಪರಿಶೀಲಿಸಿ ಸಮರ್ಥನೆ/ಸ್ಪಷ್ಟೀಕರಣ/ದಾಖಲಾತಿಗಳೊಂದಿಗೆ ವರದಿ ಸಲ್ಲಿಸುವಂತೆ ದಿನಾಂಕ:28/10/2024 ರ ಪತ್ರದಲ್ಲಿ ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಇವರಿಗೆ ನಿರ್ದೇಶಿಸಲಾಗಿದ್ದು, ಅದರಂತೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ರವರ ಪತ್ರ ದಿನಾಂಕ:29.11.2024ರಂದು ಗಂಗಾಮತ ಮತ್ತು ಅದರ ಉಪ ಜಾತಿಗಳನ್ನು (ಕೋಲಿ, ಕಬ್ಬಲಿಗ, ಬೆಸ್ತ, ಅಂಬಿಗ, ಬಾರಿಕ ಒಳಗೊಂಡಂತೆ) ಕರ್ನಾಟಕ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸುವ ಸಂಬಂಧ ಕೈಗೊಂಡ ಕುಲಶಾಸ್ತ್ರೀಯ ಅಧ್ಯಯನ ವರದಿಗೆ ಕೇಂದ್ರ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ರವರು ಪ್ರಸ್ತಾಪಿಸಿರುವ ಅಂಶಗಳ ಬಗ್ಗೆ ಪರಿಶೀಲಿಸಿ ಮತ್ತೊಮ್ಮೆ ಸೂಕ್ತ ಸಮರ್ಥನೆ/ಸ್ಪಷ್ಟೀಕರಣ/ದಾಖಲಾತಿಗಳೊಂದಿಗೆ ವರದಿಯನ್ನು ಸಲ್ಲಿಸುವಂತೆ ಕುಲಸಚಿವರು, ಕನ್ನಡ ವಿಶ್ವ ವಿದ್ಯಾಲಯ, ಹಂಪಿ ವಿದ್ಯಾರಣ್ಯ ರವರಿಗೆ ಕೋರಲಾಗಿದೆ.

**ಸಂಖ್ಯೆ: STW/SECB/SAD/7/2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿಗಳು